ಪ್ರೊ. ಟಿ. ಎಂ. ಭಾಸ್ಕರ್
ಕುಲಸಚಿವರು

ಕುಲಸಚಿವರ ಕಾರ್ಯಾಲಯ
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
ಜ್ಞಾನ ಸಾಗರ, ಕಂಟೋನ್ಮೆಂಟ್, ಬಳ್ಳಾರಿ-583105
ದೂ: 08392-242873 www.vskub.ac.in

ಸಂಖ್ಯೆ: ವಿಶ್ರೀಕೃವಿಬ/ಪ.ಜಾ-ಪ.ಪಂ ಬಾ.ವ.ನಿ/ 162 / 2017-18 ದಿನಾಂಕ: 04.07.2017

**2017-18ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಾಲಕರ ವಸತಿ ನಿಲಯದ ಪ್ರವೇಶ ಪ್ರಕಟಣೆ**

1. 2017-18ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಸತಿನಿಲಯದ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
2. http://www.sw.kar.nic.in/WebPageskan/OnlineApplicationkan.aspx ನ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಭರ್ತಿ ಮಾಡಬೇಕು.
3. ಭರ್ತಿ ಮಾಡಿದ ಅರ್ಜಿಯನ್ನು ಡೌನ್‌ಲೋಡ್ ಮಾಡಿ, ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ **29.07.2017ರ ಸಂಜೆ 5.30ರೊಳಗಾಗಿ** ನಿಲಯಪಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಾಲಕರ ವಸತಿ ನಿಲಯ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ ಇವರಿಗೆ ತಲುಪಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
4. ನಿಲಯದಲ್ಲಿ ಒಟ್ಟು 92 ಖಾಲಿ ಸ್ಥಾನಗಳಿದ್ದು ಅವುಗಳನ್ನು ಭರ್ತಿ ಮಾಡಲು ವಿಭಾಗವಾರು ಮೆರಿಟ್ ಆಧಾರದ ಮೇಲೆ ಪರಿಗಣಿಸಲಾಗುವುದು.
5. ಆಯ್ಕೆಯಾದ ಅಭ್ಯರ್ಥಿಗಳ ಹೆಸರನ್ನು ದಿನಾಂಕ 31.07.2017ರಂದು ಸಂಜೆ 4.30ಕ್ಕೆ ವಿಶ್ವವಿದ್ಯಾಲಯದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಹಾಗೂ ಯಥಾ ಮಾಹಿತಿಯನ್ನು ನಿಲಯದ ಸೂಚನಾ ಫಲಕದಲ್ಲಿಯೂ ಸಹ ಪ್ರಕಟಿಸಲಾಗುವುದು.
6. ಆಯ್ಕೆಯಾದ ಅಭ್ಯರ್ಥಿಗಳ ಪ್ರವೇಶವನ್ನು ದಿನಾಂಕ 01.08.2017 ರಿಂದ 05.08.2017ರವರೆಗೆ ಮಾಡಿಕೊಳ್ಳಲಾಗುವುದು.
7. ಖಾಲಿ ಸ್ಥಾನಗಳು ಉಳಿದಿದ್ದಲ್ಲಿ ಮತ್ತೊಮ್ಮೆ ವಿಭಾಗದ ಅನುಸಾರವಾಗಿ ಮೆರಿಟ್ ಆಧಾರದ ಮೇಲೆ ದಿನಾಂಕ 07.08.2017ರಂದು ನೇರವಾಗಿ ಪ್ರವೇಶಾವಕಾಶ ಕಲ್ಪಿಸಲಾಗುವುದು.
8. ಪ್ರವೇಶ ಪಡೆದ ನಿಲಯಾರ್ಥಿಗಳು 1000.00 (ಒಂದು ಸಾವಿರ ರೂ.ಗಳು ಮಾತ್ರ)ಗಳನ್ನು ಎಚ್ಚರಿಕೆ ಮೊತ್ತವಾಗಿ ವಿ.ವಿ. ಆವರಣದ ಕೆನರಾ ಬ್ಯಾಂಕಿನಲ್ಲಿ ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ಇವರ ಖಾತೆಗೆ (ಖಾತೆ ಸಂಖ್ಯೆ 3866101000001ಗೆ) ಪಾವತಿಸಬೇಕು. ಪಾವತಿಸಿದ ರಶೀದಿ ಹಾಗೂ ಮುಚ್ಚಳಿಕೆ ಪತ್ರವನ್ನು ವಿಭಾಗದ ಮುಖ್ಯಸ್ಥರು ಹಾಗೂ ಪೋಷಕರಿಂದ ಸಹಿ ಪಡೆದು ಸಲ್ಲಿಸಬೇಕು.
9. ಒಂದು ವೇಳೆ ವಿಶ್ವವಿದ್ಯಾಲಯದ ಆವರಣದ ನಿಲಯದಲ್ಲಿ ಸೀಟು ಸಿಗದ ಸಂಧರ್ಭದಲ್ಲಿ ಬಳ್ಳಾರಿ ನಗರದ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಾವಕಾಶಗಳಿರುತ್ತವೆ. ಈ ಕುರಿತ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ, ಡಾ. ಬಿ ಆರ್ ಅಂಬೇಡ್ಕರ್ ಭವನ ಅಥವಾ ಜಿಲ್ಲಾ ಪರಿಶಿಷ್ಟ ವರ್ಗದ ಕಲ್ಯಾಣಾಧಿಕಾರಿಗಳು ವಾಲ್ಮೀಕಿ ಭವನ, 1ನೇ ಗೇಟ್, ಬಳ್ಳಾರಿ ಇವರನ್ನು ಸಂಪರ್ಕಿಸಬಹುದಾಗಿದೆ.
10. ವಿಶ್ವವಿದ್ಯಾಲಯದ ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹೆಚ್ಚಿನ ಮಾಹಿತಿಗಾಗಿ www.vskub.ac.in ವೆಬ್‌ಸೈಟ್‌ನ್ನು ಸಂಪರ್ಕಿಸಬಹುದಾಗಿದೆ.

4/7/2017

ಕುಲಸಚಿವರು
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಜ್ಞಾನ ಸಾಗರ, ಬಳ್ಳಾರಿ